ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
'AKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಷಯ : DEPARTMENT / SUBJECT: ಕೋವಿಡ್-19

ು : NAME OF THE NEWS PAPER: ಉದಯವಾಣಿ

ದಿನಾಂಕ : DATE : 26/12/20

# ಟೆಸ್ಟ್ ಗೆದ್ದ ನಾಯಕರು

ಉವಾ 26/12/20

## ಸಚಿವರು, ಶಾಸಕರು, ಐಎಎಸ್, ಐಪಿಎಸ್ ಅಧಿಕಾರಿಗಳ ಮೇಲೆ ಲಸಿಕೆ ಪ್ರಯೋಗ

## ಬೆಂಗಳೂರಲ್ಲಿ ಸ್ವಯಂಸೇವಕರ ಕೊರತೆ; ಮೈಸೂರು, ಬೆಳಗಾವಿಯಲ್ಲಿ ಯಶ

• ಜಯಪ್ರಕಾಶ್ ಬಿರಾದಾರ್

ಬೆಂಗಳೂರು: ಭಾರತ್ ಬಯೋಟೆಕ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೊರೊನಾ ಲಸಿಕೆಯ (ಕೊವ್ಯಾಕ್ಸಿನ್) ಮೂರನೇ ಹಂತದ ಪ್ರಯೋಗದಲ್ಲಿ ರಾಜ್ಯದ ಸಚಿವರು, ಶಾಸಕರು ಹಾಗೂ ಸಂಸದರು ಸೇರಿದಂತೆ 14 ಮಂದಿ ಜನಪ್ರತಿನಿಧಿಗಳು, 98 ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಸ್ವಯಂ ಪ್ರೇರಿತವಾಗಿ ಭಾಗವಹಿಸಿ ಲಸಿಕೆ ಪಡೆದುಕೊಂಡಿದ್ದಾರೆ. ಈ ಮೂಲಕ 'ನಾವು ಲಸಿಕೆ ಪಡೆದಿದ್ದೇವೆ, ನೀವೂ ಪಡೆಯಿರಿ' ಎಂದು ಜನಸಾಮಾನ್ಯರಿಗೆ ಉತ್ತೇಜನ ನೀಡುವುದರ ಜೊತೆಗೆ ಲಸಿಕೆ ಬಗ್ಗೆ ವಿಶ್ವಾಸ ಮೂಡಿಸುವ ಪ್ರಯತ್ನ ನಡೆಸಿದ್ದಾರೆ.

ನಗರದ ವೈದೇಹಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಯುತ್ತಿದೆ. ಈಗಾಗಲೇ 382 ಮಂದಿಗೆ ಕೊವ್ಯಾಕ್ಸಿನ್ ಎರಡು ಡೋಸ್‌ಗಳನ್ನು ಯಶಸ್ವಿಯಾಗಿ ನೀಡಲಾಗಿದೆ. ಲಸಿಕೆ ಪಡೆದವರ ಪೈಕಿ ರಾಜ್ಯದ ರಾಜಕೀಯ ನಾಯಕರು, ಅಧಿಕಾರಿಗಳು ಇರುವುದು ವಿಶೇಷ.

ಎಲ್ಲರೂ ಸ್ವಯಂಪ್ರೇರಿತವಾಗಿ ಭಾಗವಹಿಸಿದ್ದು, ಮೊದಲ ಡೋಸ್ ಪಡೆದ ನಂತರದ 28 ದಿನಗಳ ಬಳಿಕ ಎರಡನೇ ಬೂಸ್ಟರ್ ಡೋಸ್ ನೀಡಲಾಗಿದೆ. ಲಸಿಕೆ ಪಡೆದವರಲ್ಲಿ ಈವರೆಗೂ ಯಾವುದೇ ಸಮಸ್ಯೆ ಕಾಣಿಸಿಕೊಂಡಿಲ್ಲ ಎಂದು ಕ್ಲಿನ್ಯಾಕ್ ಇಂಟರ್‌ನ್ಯಾಷನಲ್ ಪ್ರೈ.ಲಿ. ನಿರ್ದೇಶಕಿ ಚೈತನ್ಯ ಆದಿಕೇಶವುಲು ತಿಳಿಸಿದ್ದಾರೆ.

ಪ್ರಾದೇಶಿಕವಾರು ಮತ್ತು ವಿವಿಧ ಜನಾಂಗಗಳ (ರೇಸ್) ಮೇಲೆ ಲಸಿಕೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ಅಧ್ಯಯನ ಮಾಡುವ ನಿಟ್ಟಿನಲ್ಲಿ ದೇಶದ 14 ರಾಜ್ಯಗಳಲ್ಲಿ ಕೊವ್ಯಾಕ್ಸಿನ್‌ನ 3ನೇ ಹಂತದ ಪ್ರಯೋಗ ನಡೆಯುತ್ತಿದೆ. ಈ ಪೈಕಿ ರಾಜ್ಯದಲ್ಲಿ ಬೆಳಗಾವಿ, ಮೈಸೂರು, ಬೆಂಗಳೂರಿನ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಯೋಗ ನಡೆಯುತ್ತಿದೆ.

▶ 5ನೇ ಪುಟಕ್ಕೆ

### ಸ್ವಯಂ ಪ್ರೇರಿತರಾಗಿ ಮುಂದೆ ಬನ್ನಿ




ಸದ್ಯ ವೈದೇಹಿ ಕಾಲೇಜಿನಲ್ಲಿ ಲಸಿಕೆ ಪ್ರಯೋಗಕ್ಕೆ ಸ್ವಯಂಸೇವಕರ ಕೊರತೆ ಎದುರಾಗಿದೆ. ಒಟ್ಟು 1,000 ಮಂದಿಗೆ ಲಸಿಕೆ ನೀಡಲು ಉದ್ದೇಶಿಸಲಾಗಿದೆ. ಈವರೆಗೂ 424 ಮಂದಿ ಮಾತ್ರ ಆಗಮಿಸಿದ್ದು, ಬಾಕಿ 576 ಮಂದಿಯನ್ನು ಆಸ್ಪತ್ರೆ ಎದುರು ನೋಡುತ್ತಿದೆ. ಈಗಾಗಲೇ ಜನಪ್ರತಿನಿಧಿಗಳು, ಆಸ್ಪತ್ರೆ ವೈದ್ಯರು, ಅವರ ಕುಟುಂಬ ವರ್ಗಕ್ಕೆ ಲಸಿಕೆ ನೀಡಲಾಗಿದ್ದು, ಯಾವುದೇ ಅಡ್ಡ ಪರಿಣಾಮ ಬೀರಿಲ್ಲ. ಲಸಿಕೆ ಪಡೆದವರ ಮತ್ತು ಅವರ ಕುಟುಂಬಸ್ಥರ ಆರೋಗ್ಯವು ನಮ್ಮ ಹೊಣೆ ಆಗಿರುತ್ತದೆ. ಜನರು ಆತಂಕಕ್ಕೊಳಗಾಗದೇ ಪ್ರಯೋಗದಲ್ಲಿ ಭಾಗವಹಿಸಬೇಕು ಎಂದು ಕ್ಲಿನ್ಯಾಕ್ ಇಂಟರ್‌ನ್ಯಾಷನಲ್ ಮನವಿ ಮಾಡಿದೆ. ಪ್ರಯೋಗಕ್ಕೆ ಒಳಪಡಲು ಇಚ್ಛಿಸುವವರು ವೈದೇಹಿ ಕಾಲೇಜು, ಕ್ಲಿನ್ಯಾಕ್ ಸಂಸ್ಥೆ ನಿರ್ದೇಶಕಿ ಚೈತನ್ಯ ಆದಿಕೇಶವಲು (ಮೊ.ಸಂ 9513925857/ 9739419272) ಅವರನ್ನು ಸಂಪರ್ಕಿಸಬಹುದು.

### ಲಸಿಕೆ ಪಡೆದ ಹೆಮ್ಮೆ ಇದೆ

ನವೆಂಬರ್‌ನಲ್ಲಿ ಲಸಿಕೆ ಹಾಕಿಸಿಕೊಂಡಿದ್ದು, ಬೂಸ್ಟರ್ ಡೋಸ್ ಕೂಡಾ ಮುಗಿದಿದೆ. ಯಾವುದೇ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿಲ್ಲ. ದಿನಚರಿ, ಆಹಾರ ಕ್ರಮದಲ್ಲಿ ಯಾವುದೇ ಬದಲಾವಣೆ ಇಲ್ಲ. ಪ್ರಯೋಗ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಮತ್ತು ಆರಂಭದಲ್ಲಿಯೇ ಲಸಿಕೆ ಪಡೆದ ಬಗ್ಗೆ ಹೆಮ್ಮೆಯಿದೆ ಎಂದು ಹೆಸರು ಹೇಳಲು ಇಚ್ಛಿಸದ ಪ್ರತಿನಿಧಿ ಹೇಳಿದ್ದಾರೆ.

### ಮೈಸೂರಿನಲ್ಲಿ ಪ್ರಯೋಗ ಯಶ

• ಸತೀಶ್ ದೇಪುರ

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನ ಕೇಂದ್ರದಲ್ಲಿ ಸೀರಂ ಸಂಸ್ಥೆಯ ಕೊವಿಶೀಲ್ಡ್ ಹಾಗೂ ರಷ್ಯಾದ ಸ್ಪುಟ್ನಿಕ್ ಲಸಿಕೆ ಪರೀಕ್ಷೆ ಯಶ ಪಡೆದಿದೆ. ಕೊವಿಶೀಲ್ಡ್ , ನೋವಾ-ವ್ಯಾಕ್ಸ್ ಎಂಬ 2 ಲಸಿಕೆಗಳನ್ನು ಪ್ರಯೋಗ ಮಾಡಲಾಗಿದ್ದು ಕೊವಿಶೀಲ್ಡ್ ಪ್ರಯೋಗ ಹಂತದಲ್ಲಿದ್ದರೆ, ನೋವಾ-ವ್ಯಾಕ್ಸ್ ಪ್ರಯೋಗ ಸಂಪೂರ್ಣ ಯಶಸ್ವಿಯಾಗಿದೆ. 120 ಮಂದಿ ಮೇಲೆ ನಡೆದ ಸ್ಪುಟ್ನಿಕ್ ಪರೀಕ್ಷೆಯೂ ಯಶಸ್ವಿಯಾಗಿದೆ. ಈ ವರದಿಯನ್ನು ಆಸ್ಟ್ರೇಲಿಯಾ ಮೂಲದ ಸಂಸ್ಥೆಗೆ ಮತ್ತು ಸೀರಂಗೆ ನೀಡಿದ್ದೇವೆ. ಪ್ರತಿಕ್ರಿಯೆ ಬಂದ ನಂತರ ಮುಂದುವರಿಯುತ್ತೇವೆ ಎಂದು ಸಂಸ್ಥೆ ಮಾಹಿತಿ ನೀಡಿದೆ. ಸರ್ಕಾರದ ನಿರ್ದೇಶನದ ನಂತರ ಜನವರಿ ಮೊದಲ ವಾರದಿಂದ ವ್ಯಾಕ್ಸಿನ್ ನೀಡಲು ಸಿದ್ಧತೆ ನಡೆದಿದೆ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನ ಕೇಂದ್ರದ ಸಮ ಕುಲಾಧಿಪತಿ ಪ್ರೊ.ಬಿ. ಸುರೇಶ್ 'ಉದಯವಾಣಿ'ಗೆ ತಿಳಿಸಿದ್ದಾರೆ. ಸ್ಪುಟ್ನಿಕ್ ಬಳಕೆಗೆ ಹಸಿರು ನಿಶಾನೆ ಸಿಕ್ಕಿದ್ದು, ಸರ್ಕಾರದ ಅನುಮತಿ ಸಿಕ್ಕ ತಕ್ಷಣ ಅದು ಬಳಕೆಗೆ ಮುಕ್ತವಾಗಲಿದೆ ಎಂದಿದ್ದಾರೆ.

### ಬೆಳಗಾವಿಯಲ್ಲಿ ಜನಸ್ಪಂದನೆ

• ಕೇಶವ ಆದಿ

ಬೆಳಗಾವಿಯಲ್ಲಿ ಲಸಿಕೆ ಪರೀಕ್ಷೆಗೆ ನಿರೀಕ್ಷೆಗೂ ಮೀರಿ ಜನರ ಸ್ಪಂದ ಸಿಗುತ್ತಿದ್ದು ಲಸಿಕೆ ಪರಿಣಾಮ ಮತ್ತಷ್ಟು ಆಶಾಭಾವನೆ ಹುಟ್ಟಿಸಿದೆ.

ಕೊವ್ಯಾಕ್ಸಿನ್ ಪರೀಕ್ಷೆಯಲ್ಲಿ ಬೆಳಗಾವಿಯ ಜೀವನರೇಖಾ ಆಸ್ಪತ್ರೆ ಡಿಸೆಂಬರ್ ಅಂತ್ಯದವರೆಗೆ 1000 ಜನರ ಮೇಲೆ ಪರೀಕ್ಷೆ ನಡೆಸುವ ಗುರಿ ನೀಡಲಾಗಿತ್ತು. ಈಗಾಗಲೇ 1100 ಜನರ ಮೇ ಪರೀಕ್ಷೆ ನಡೆಸಲಾಗಿದೆ. ಇದುವರೆಗೆ ಯಾರ ಆರೋಗ್ಯ ಲ್ಲಿಯೂ ವ್ಯತ್ಯಾಸ ಉಂಟಾಗಿಲ್ಲ ಎಂದು ಆಸ್ ನಿರ್ದೇಶಕ ಡಾ| ಅಮಿತ್ ಭಾತೆ ತಿಳಿಸಿದ್ದಾರೆ.

ಬೆಳಗಾವಿ, ಧಾರವಾಡ, ವಿಜಯಪುರ, ಬಾಗಕೋಟೆ, ಗೋಕಾಕ, ದಾವಣಗೆರೆ,ಮಹಾರಾಷ್ಟ್ರ ಕೊಲ್ಲಾಪುರ, ಗೋವಾ ಸೇರಿ ಅನೇಕ ಕಡೆಗಳಿಂ ಜನರು ಬಂದು ಪರೀಕ್ಷೆಗೆ ಸಹಕಾರ ನೀಡಿದ್ದಾರೆ. ಪ್ರತಿ ದಿನ ಸುಮಾ 70ರಿಂದ 80 ಜನರು ಬರುತ್ತಿದ್ದಾರೆ. ಈ ರೀತಿಯ ಪರೀಕ್ಷೆಗೆ ಒಳಗಾದವ ರಾಜಕೀಯ ಮುಖಂಡರು, ಕಾರ್ಯಕರ್ತರು, ನಿವೃತ್ತ ಪೊಲೀ ಅಧಿಕಾರಿಗಳು, ಸಮಾಜ ಸೇವಾ ಕಾರ್ಯಕರ್ತರು ಸೇರಿದ್ದಾರೆ. ಅ ಸಂಗತಿ ಎಂದರೆ ಇದುವರೆಗೆ ನಡೆದಿರುವ 1100 ಜನರ ಪರೀಕ್ಷೆಯ 400ಕ್ಕೂ ಹೆಚ್ಚು ಮಹಿಳೆಯರು ಇದರಲ್ಲಿ ಭಾಗಿಯಾಗಿದ್ದಾರೆ.

# ಟೆಸ್ಟ್ ಗೆದ್ದ ನ್ಯಾಯಕರು

26/12/20

1ನೇ ಪುಟದಿಂದ ▶ **ಲಸಿಕೆ ಪಡೆವಾಗ ಏನೆಲ್ಲಾ ಪ್ರಕ್ರಿಯೆ ಇರುತ್ತದೆ?:** ಮೊದಲು 30 ನಿಮಿಷ ವೈಯುಕ್ತಿಕ ವಿವರಗಳನ್ನು ದಾಖಲಿಸಿಕೊಳ್ಳಲಾಗುತ್ತದೆ. ಈ ವೇಳೆಯೇ ಲಸಿಕೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಗುತ್ತದೆ. ಲಸಿಕೆ ಪಡೆಯುವವರ ಆರೋಗ್ಯದ ಜವಾಬ್ದಾರಿ, ಅನುಸರಿಸಬೇಕಾದ ಕ್ರಮಗಳ ಕುರಿತು ಒಪ್ಪಂದಕ್ಕೆ ಸಹಿ ಪಡೆಯಲಾಗುತ್ತದೆ. 15 ನಿಮಿಷ ಸಾಮಾನ್ಯ ಆರೋಗ್ಯ ತಪಾಸಣೆ ಮಾಡಲಾಗುತ್ತದೆ. ಆನಂತರ 2 ನಿಮಿಷದಲ್ಲಿ ಚುಚ್ಚು ಮದ್ದು ಮೂಲಕ ಲಸಿಕೆ ನೀಡಲಾಗುತ್ತದೆ. ಬಳಿಕ ಒಂದು ಗಂಟೆ ಅವಲೋಕನ ಅವಧಿ ಮುಗಿದ ಮೇಲೆ ಮನೆಗೆ ಮರಳಬಹುದು. ಮತ್ತೆ 28 ದಿನಗಳಾದ ಮೇಲೆ ಬೂಸ್ಟರ್ ಡೋಸ್ ನೀಡಲಾಗುತ್ತದೆ.

**ಯಾರೆಲ್ಲಾ ಭಾಗವಹಿಸಬಹುದು?:** 18 ವರ್ಷ ಮೇಲ್ಪಟ್ಟವರು. ಕೊರೊನಾ ಸೋಂಕಿಗೊಳಗಾಗದ ಅಥವಾ ಸೋಂಕು ಬಂದು 2 ತಿಂಗಳು ಪೂರೈಸಿರುವವರು ಲಸಿಕೆ ಪಡೆಯಲು ಅರ್ಹರು.

**ಪ್ರತಿನಿಧಿಗಳಿಗೆ ಏಮ್ಸ್ ಆಹ್ವಾನ:** ಭಾರತ್ ಬಯೋಟೆಕ್‌ನ ಕೊವ್ಯಾಕ್ಸಿನ್ 3ನೇ ಹಂತದ ಪ್ರಯೋಗ ನಡೆಸುತ್ತಿರುವ ದೆಹಲಿಯ ಏಮ್ಸ್ ಆಸ್ಪತ್ರೆಯು ಲಸಿಕೆ ಪಡೆಯಲು ಪ್ರತಿನಿಧಿಗಳಿಗೆ ಆಹ್ವಾನ ನೀಡಿದೆ. ಪ್ರಯೋಗಕ್ಕೆ 1,500 ಪ್ರತಿನಿಧಿಗಳ ಅವಶ್ಯಕತೆಯಿದ್ದು ಸಾಕಷ್ಟು ಸಂಖ್ಯೆಯ ಜನ ಮುಂದೆ ಬಂದಿಲ್ಲ. ಹೀಗಾಗಿ, ಡಿ.31ರೊಳಗೆ ನೋಂದಣಿ ಮಾಡಿಸಿಕೊಳ್ಳುವಂತೆ ಏಮ್ಸ್ ಜಾಹೀರಾತು ನೀಡಿದೆ. ನಮಗೆ 1500–2000 ಮಂದಿ ಪ್ರತಿನಿಧಿಗಳ ಅಗತ್ಯವಿದೆ. ಆದರೆ, ಈವರೆಗೆ ಕೇವಲ 200 ಮಂದಿಯಷ್ಟೇ ನೋಂದಣಿ ಮಾಡಿಕೊಂಡಿದ್ದಾರೆ. ಇನ್ನಷ್ಟು ಮಂದಿಯ ಅವಶ್ಯಕತೆಯಿದ್ದು ಸ್ವಯಂಪ್ರೇರಿತವಾಗಿ ಪ್ರತಿನಿಧಿಗಳು ಮುಂದೆ ಬರಬೇಕು ಎಂದು ಮನವಿ ಮಾಡಲಾಗಿದೆ. ಇದೇ ವೇಳೆ, ಝೈಡಸ್ ಕ್ಯಾಡಿಲ್ಲಾ ಸಂಸ್ಥೆಯು ತನ್ನ ಲಸಿಕೆಯನ್ನು 3ನೇ ಹಂತದದಲ್ಲಿ 30 ಸಾವಿರ ಮಂದಿಯ ಮೇಲೆ ಪ್ರಯೋಗಿಸಲು ಚಿಂತನೆ ನಡೆಸಿರುವುದಾಗಿ ಹೇಳಿದೆ.




## ಜನವರಿ 18ಕ್ಕೆ ಬಿಡುಗಡೆ

ಭಾರತ್ ಬಯೋಟೆಕ್‌ನ ಲಸಿಕೆ ಬಿಡುಗಡೆಗೆ ಜನವರಿ 18ರ ದಿನಾಂಕ ನಿಗದಿಯಾಗಿದೆ. ಸದ್ಯ ತುರ್ತು ಲಸಿಕೆ ಸಿದ್ಧವಿದ್ದು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಸೂಚನೆಯಂತೆ ಪೂರೈಕೆ ಮಾಡಲಾಗುತ್ತದೆ. ತುರ್ತು ಲಸಿಕೆ ಚುಚ್ಚು ಮದ್ದಾಗಿದ್ದು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಆರಂಭವಾಗುವ ಏಪ್ರಿಲ್ ವೇಳೆಗೆ ಪೋಲಿಯೋ ಮಾದರಿಯಲ್ಲಿ ಹನಿ (ಡ್ರಾಪ್) ಲಸಿಕೆ ಸಿದ್ಧವಾಗುತ್ತದೆ. ಒಂದು ಹನಿಯನ್ನು ಮೂಗಿನಲ್ಲಿ ಹಾಕಲಾಗುತ್ತದೆ ಎಂದು ಚೈತನ್ಯ ಆದಿಕೇಶವುಲು ತಿಳಿಸಿದರು.